ಸೇಷನ್ ಕೇಸ್ ನಂ.22/2025
ಪಿ.ಡಬ್ಲ್ಯೂಃ 10
ಸಿ.ಡಬ್ಲ್ಯೂಃ 01

**ದಿನಾಂಕಃ 23.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

5. ನಂತರ ಪೋಲೀಸರು ಮನೆಗೆ ಬಂದು ಸ್ಥಳ ಪರಿಶೀಲನೆ ಮಾಡಿ ಕೇಲವು ವಸ್ತುಗಳನ್ನು ಜಪ್ತು ಮಾಡಿಕೊಂಡಿರುತ್ತಾರೆ. ಆ ಕಾಲಕ್ಕೆ ಒಂದು ತಲೆದಿಂಬು ಹಾಗೂ ಒಂದು ಬಾಟಲ್ ನ್ನು ಜಪ್ತು ಮಾಡಿಕೊಂಡಿರುತ್ತಾರೆ. ಆ ಕಾಲಕ್ಕೆ ತನಿಖಾಧಿಕಾರಿಯು ಸುಮಾರು 3 ರಿಂದ 4 ವಸ್ತುಗಳನ್ನು ಜಪ್ತು ಮಾಡಿಕೊಂಡಿರುತ್ತಾರೆ. ಆ ಕಾಲಕ್ಕೆ ಜಪ್ತಾದ ವಸ್ತುಗಳನ್ನು ತನಿಖಾಧಿಕಾರಿಯು ನನ್ನ ಸಮಕ್ಷಮ ಪ್ಯಾಕ್ ಮಾಡಿ ಸೀಲ್ ಮಾಡಿರುತ್ತಾರೆ. ಆ ಕಾಲಕ್ಕೆ ನಮ್ಮ ಮನೆಯ ಸಿಸಿಟಿವಿಯ ಡಿವಿಆರ್ ನ್ನು ಜಪ್ತು ಮಾಡಿರುತ್ತಾರೆ. ಆ ಕಾಲಕ್ಕೆ ನಾನು ನನ್ನ ತಂದೆಯು ಬೇರೆ ಹೆಣ್ಣುವ ಮಕ್ಕಳ ಜೊತೆ ಸಂಬಂಧ ಇರುವ ವಿಡಿಯೋಗಳು ಇರುವ 8 ಹಾರ್ಡ್ ಡಿಸ್ಕಗಳನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ ಆದರೆ ಅವುಗಳನ್ನು ತನಿಖಾಧಿಕಾರಿ ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಕೆಲವು ಪ್ಲಾಟಗಳ ದಾಖಲೆಗಳನ್ನು ಸಹ ತನಿಖಾಧಿಕಾರಿ ಸಂಗ್ರಹಿಸಿರುತ್ತಾರೆ.

6. ಸಾಕ್ಷಿಯು ಈಗಾಗಲೇ ನಿಪಿಃ 7 ಎಂದು ಗುರುತಾದ ಪಂಚನಾಮೆಯನ್ನು ನೋಡಿ ಅದರಲ್ಲಿ ತನ್ನ ಸಹಿ ಇದೆ ಎಂದು, ಇದನ್ನೇ ತಖಾಧಿಕಾರಿಯು ನಮ್ಮ ಮನೆಯಲ್ಲಿ ವಸ್ತುಗಳ ಜಪ್ತು ಪಂಚನಾಮೆ ಕಾಲಕ್ಕೆ ಮಾಡಿದ ಪಂಚನಾಮೆ ಎಂದು ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ಈಗ ನಿಪಿಃ 7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ನಿಪಿಃ 8, 10 ಮತ್ತು 11 ಫೋಟೋಗಳನ್ನು ನೋಡಿ ಅವುಗಳನ್ನು ತನಿಖಾ ಕಾಲಕ್ಕೆ ತೆಗೆದಿದ್ದು ಎಂದು ನಿಪಿಃ 10 ಮತ್ತು 11 ರಲ್ಲಿ ಈ ಪ್ರಕರಣದಲ್ಲಿ ತನಿಖಾಧಿಕಾರಿಯು ನಮ್ಮ ಮನೆಯಲ್ಲಿ ಜಪ್ತು ಮಾಡಿದ ವಸ್ತುಗಳನ್ನು ತೆಗೆದುಕೊಳ್ಳುವ ಕಾಲಕ್ಕೆ ತೆಗೆದ ಫೋಟೋ ಎಂದು ಗುರುತಿಸುತ್ತಾರೆ. ಸಾಕ್ಷಿಯು ನಿಪಿಃ 17 ಎಂದು ಗುರುತಾದ ಫೋಟೋಗಳನ್ನು ನೋಡಿ ಅದರಲ್ಲಿ ತನಿಖಾಧಿಕಾರಿಯು ನಮ್ಮ ಮನೆಯ ಸಿಸಿಟಿವಿಯ ಹಾರ್ಡ್ ಡಿಸ್ಕ ನ್ನು ಜಪ್ತು

ಮಾಡಿದ ಕಾಲಕ್ಕೆ ತೆಗೆದ ಫೋಟೋ ಎಂದು ಗುರುತಿಸುತ್ತಾರೆ. ಸಾಕ್ಷಿಯು ಈಗಾಗಲೇ ನಿಪಿಃ 16 ಎಂದು ಗುರುತಾದ ಪಂಚನಾಮೆಯನ್ನು ನೋಡಿ ಅದರಲ್ಲಿ ನನ್ನ ಸಹಿ ಇದ್ದು ಇದನ್ನು ಹಾರ್ಡ ಡಿಸ್ಕ ನ್ನು ಜಪ್ತು ಮಾಡುವ ಕಾಲಕ್ಕೆ ಮಾಡಿದ ಪಂಚನಾಮೆ ಎಂದು ಗುರುತಿಸುತ್ತಾರೆ. ಸದರಿ ಸಾಕ್ಷಿಯ ಸಹಿಯನ್ನು ನಿಪಿಃ 16(ಸಿ) ಎಂದು ಗುರುತಿಸಲಾಯಿತು.

7. ಸಾಕ್ಷಿ ಮುಂದುವರೆದು ಈ ಪ್ರಕರಣದಲ್ಲಿ ತನಿಖಾಧಿಕಾರಿಯ ಹೂತು ಹಾಕಿದ್ದ ನನ್ನ ತಂದೆಯ ಶವವನ್ನು ಶವ ಪರೀಕ್ಷೆಗಾಗಿ ದಿಃ 16.10.2024 ರಂದು ಹೊರ ತೆಗೆಸಿರುತ್ತಾರೆ. ಸಾಕ್ಷಿಯು ಈಗಾಗಲೇ ನಿಪಿಃ 21 ಎಂದು ಗುರುತಾದ ದಾಖಲೆಯನ್ನು ನೋಡಿ ಇದನ್ನು ಅದೇ ಕಾಲಕ್ಕೆ ಮಾಡಿದ ಪಂಚನಾಮೆ ಎಂದು ಗುರುತಿಸುತ್ತಾರೆ. ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸಿದ್ದರಿಂದ ಅದನ್ನು ನಿಪಿಃ 21(ಡಿ) ಎಂದು ಗುರುತಿಸಲಾಯಿತು.

8. ಸಾಕ್ಷಿಯು ಈಗಾಗಲೇ ನಿಪಿಃ 23 ಎಂದು ಗುರುತಾದ 8 ಫೋಟೋಗಳನ್ನು ನೋಡಿ ಇದನ್ನು ನನ್ನ ತಂದೆಯ ಶವವನ್ನು ಹೊರ ತೆಗೆಯುವ ಕಾಲಕ್ಕೆ ಹಾಗೂ ಹೊರ ತೆಗೆದ ನಂತರ ನಾನು ಶವವನ್ನು ಗುರುತಿಸಿದ್ದು ಶವ ಪರೀಕ್ಷೆ ಆದ ನಂತರ ಶವವನ್ನು ಅಲ್ಲೇ ಹೂತು ಹಾಕಿದ್ದು ಆ ಕಾಲಕ್ಕೆ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ. ಈ ಪ್ರಕರಣದಲ್ಲಿ ಪೋಲೀಸರು ನನ್ನ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತಾರೆ.

9. ನಂತರ ನಾನು ಈ ಪ್ರಕರಣದ ಬಗ್ಗೆ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದೇ ನಾನು ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆ ಎಂದು ಗುರುತಿಸುತ್ತಾರೆ. ಸದರಿ ಹೇಳಿಕೆಯನ್ನು ನಿಪಿಃ 72 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 72(ಎ) ಯಿಂದ 72(ಸಿ) ಎಂದು ಗುರುತಿಸಲಾಯಿತು.

10. ಈ ಮೇಲೆ ಹೇಳಿದ ವಿಚಾರಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಿಚಾರಗಳು ನನಗೆ ತಿಳಿದಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-**

11. ನಾನು ದಿಃ 10.10.2024 ರಂದು ಬೆಳಗಾವಿಗೆ ಬಂದು ನನ್ನ ತಂದೆಯ ಶವವನ್ನು ನೋಡಿದಾಗ ಮುಖ ಊದಿತ್ತು ಹಾಗೂ ಕಪ್ಪಾಗಿತ್ತು ಎಂದು ಸೂಚಿಸುವುದು ಸರಿಯಲ್ಲ. ನಾನು ನನ್ನ ತಂದೆಯ ಶವ ಸಂಸ್ಕಾರ ಮುಗಿಸಿ ಮನೆಗೆ ಬಂದಾಗ ನನ್ನ ತಂದೆಯ ಕೊನೆಯ ಕ್ಷಣಗಳು ಹೇಗೆ ಇದ್ದವು ಎಂದು ನೋಡಲು ನಮ್ಮ ಹಾಲ್ ನಲ್ಲಿ ಹಾಗೂ ಬೆಡ್ ರೂಮ್‌ನಲ್ಲಿ ಅಳವಡಿಸಿದ್ದ ಸಿಸಿಟಿವಿ ಪುಟೇಜ್ ಗಳನ್ನು ನೋಡಲು ಪ್ರಯತ್ನಿಸಿದಾಗ ಅವುಗಳನ್ನು ಅಳಿಸಿ ಹಾಕಲಾಗಿತ್ತು, ಈ ಬಗ್ಗೆ ನಾನು ನನ್ನ ತಮ್ಮ ಚಾಸಾಃ 25 ರವರನ್ನು ವಿಚಾರಿಸಿದಾಗ ನನ್ನ ತಾಯಿಯ ಹೇಳಿಕೆಯ ಮೇಲೆ ನಾನು ಅದನ್ನು ಅಳಿಸಿ ಹಾಕಿದ್ದೇನೆಂದು ತಿಳಿಸಿದ ಎಂದರೆ ಸರಿಯಲ್ಲ. ನಾನು ನನ್ನ ತಾಯಿಯನ್ನು ಈ ಬಗ್ಗೆ ವಿಚಾರಿಸಿದಾಗ ಆಕೆಯು ಚಾಸಾಃ 25 ರವರೇ ಏನೋ ಮಾಡಲು ಹೋಗಿ ಡಿಲಿಟ್ ಮಾಡಿರಬಹುದು ಎಂದು ಹೇಳಿದಳು, ಆನಂತರ ಮತ್ತೆ ನಾನು ಚಾಸಾಃ 25 ರವರನ್ನು ವಿಚಾರಿಸಿದಾಗ ಆತನು ಅಮ್ಮ ಹೇಳಿದ್ದರಿಂದಲೇ ನಾನು ದೃಶ್ಯಾವಳಿಗಳನ್ನು ಅಳಿಸಿ ಹಾಕಿದ್ದೇನೆಂದು ಹೇಳಿದ, ಆಗ ಮತ್ತೇ ನಾನು ನನ್ನ ತಾಯಿಯನ್ನು ವಿಚಾರಿಸಿದಾಗ ಸಂಬಂಧಿಕರು ಬಂದು ಸಿಸಿಟಿವಿ ನೋಡಲು ಹಾಗೂ ಅದನ್ನು ತೋರಿಸಿ ಎಂದು ತೊಂದರೆ ಮಾಡುತ್ತಾರೆ ಆದ್ದರಿಂದ ನಾನು ಚಾಸಾಃ 25 ರವರ ಮೂಲಕ ಅವುಗಳನ್ನು ಅಳಿಸಿ ಹಾಕಿದ್ದೇನೆಂದು ತಿಳಿಸಿದರು ಎನ್ನುವುದು ಸರಿಯಲ್ಲ.

12. ನಂತರ ನಾನು ರಾತ್ರಿ ಮಲಗಿಕೊಳ್ಳುವ ಕಾಲಕ್ಕೆ ಘಟನೆ ಹೇಗೆ ಆಯಿತು ಎಂದು ಚಾಸಾಃ 24 ಮತ್ತು 25 ರವರನ್ನು ವಿಚಾರಿಸಿದಾಗ ಚಾಸಾಃ 24 ರವರು ನನಗೆ ಹೇಳಿದ್ದೇನೆಂದರೆ, ನಿನ್ನೆ ಸಾಯಂಕಾಲ 07.00 ಗಂಟೆ ಸುಮಾರಿಗೆ ನಾನು, ನನ್ನ ತಂದೆ ಮಲಗುವ ಕೋಣೆಯಲ್ಲಿ ಅವರ ಜೊತೆ ಮಲಗಿದ್ದೆ, ಆದರೆ ಅಮ್ಮ ನನ್ನನ್ನು ಅಣ್ಣ ಮಲಗಿದ್ದ ಕೋಣೆಗೆ ವರ್ಗಾಯಿಸಿದ್ದರು, ಆಗ ಚಾಸಾಃ 25 ರವರ ಬಳಿಯಿದ್ದ ಮೊಬೈಲ್ ಫೋನ್ ನ್ನು ಸಹ ಅಮ್ಮ ತೆಗೆದುಕೊಂಡು ಹೋಗಿ ಕೋಣೆಯ ಚೀಲಕ ಹಾಕಿಕೊಂಡಳು ಎಂದು

ಹೇಳಿದನು ಎಂದು ಸೂಚಿಸುವುದು ಸರಿಯಲ್ಲ. ಆತ ಮುಂದುವರೆದು ಸ್ವಲ್ಪ ಸಮಯದ ನಂತರ ನಮ್ಮ ತಂದೆಯ ಕೋಣೆಯಿದ ಕಿರುಚಾಡಿದ ಶಬ್ದ ಕೇಳಿಸಿತು, ಆಗ ಏನು ಎಂದು ನೋಡಲು ಹೊರಗೆ ಹೋಗಲು ನಮ್ಮ ಕೋಣೆಯ ಬಾಗಿಲು ತೆಗೆಯಲು ಪ್ರಯತ್ನಿಸಿದಾಗ ಅದು ತೆರೆಯಲಿಲ್ಲ, ಸ್ವಲ್ಪ ಸಮಯದ ನಂತರ ಕೋಣೆಯ ಬಾಗಿಲನ್ನು ಅಮ್ಮ ತೆರೆದರು, ಆಗ ನಾನು ತಂದೆಯ ರೂಮ್ ಗೆ ಹೋಗಿ ನೋಡಲಾಗಿ ನನ್ನ ತಂದೆಯ ನಾಲಿಗೆ ಹೊರಗೆ ಬಂದಿತ್ತು, ನೀರು ಕುಡಿಸಲು ಮುಂದಾದಾಗ ಅದಕ್ಕೆ ಅಮ್ಮ ಬೇಡ ಕಾರಣ ನಿಮ್ಮ ತಂದೆ ಈಗ ಕುಡಿದು ಮಲಗಿದ್ದು ನೀರು ಹಾಕುವುದು ಸರಿಯಲ್ಲ ಎಂದು ನನಗೆ ಬಿಡಲಿಲ್ಲ ಎಂದು ಹೇಳಿದನು ಎಂದು ಸೂಚಿಸುವುದು ಸರಿಯಲ್ಲ. ಆಗ ನಾನು ಚಾಸಾಃ 25 ರರ ಮೊಬೈಲ್ ಫೋನ್ ನ್ನು ತೆಗೆದುಕೊಂಡು ಬಂದು ನನ್ನ ಅಣ್ಣ ವಿಶಾಲ ಪದ್ಮನ್ನವರ ರವರಿಗೆ ಬರಲು ತಿಳಿಸಿದ್ದು 5 ನಿಮಿಷಗಳಲ್ಲಿ ಆತ ಬಂದಿದ್ದು, ಆತ ನನ್ನ ತಂದೆಯನ್ನು ನೋಡಲು ಹೋದಾಗ ಅದಕ್ಕೆ ನನ್ನ ತಾಯಿ ಬಿಡಲಿಲ್ಲ, ಆತನನ್ನು ಇನ್ನೂ ಒಂದು ಗಂಟೆ ಬಿಟ್ಟು ಬಾ ಎಂದು ಹೊರ ಕಳುಹಿಸಿದಳು, ಆತ ನನ್ನ ತಂದೆಯನ್ನು ಭೇಟಿಯಾಗಲು ಒತ್ತಾಯಿಸಿದರು ಆಕೆ ಆತನಿಗೆ ಅವಕಾಶ ಕೊಡಲಿಲ್ಲ ಎಂದು ಹೇಳಿದ ಎನ್ನುವುದು ಸರಿಯಲ್ಲ.

13. 6 ತಿಂಗಳ ಹಿಂದೆ ನನ್ನ ತಾಯಿಯು 2 ನೇ ಆರೋಪಿಯ ಜೊತೆ ಸಲುಗೆಯಿಂದ ಮಾತನಾಡುವ ಕಾಲಕ್ಕೆ ಸಿಕ್ಕಿಬಿದ್ದು ಆಗ ನನ್ನ ತಂದೆ ತಾಯಿ ಜಗಳ ಮಾಡಿಕೊಂಡಿದ್ದರು, ಈ ಬಗ್ಗೆ ನನ್ನ ದೊಡ್ಡಪ್ಪ ರಾಜು ಪದ್ಮನ್ನವರ ಅವರಿಬ್ಬರಿಗೆ ಬುದ್ದಿ ಹೇಳಿ ಸಮಾಧಾನ ಮಾಡಿದ್ದರು ಎಂದರೆ ಆ ವಿಚಾರ ನನಗೆ ಗೊತ್ತಿಲ್ಲ. ಇದಾದ ನಂತರವು ಸಹ ನನ್ನ ತಾಯಿ 2 ನೇ ಆರೋಪಿಯೊಂದಿಗೆ ಮಾತನಾಡುವುದನ್ನು ಮುಂದುವರೆಸಿದ್ದಳು ಎಂದರೆ ಆ ವಿಚಾರ ಸಹ ನನಗೆ ಗೊತ್ತಿಲ್ಲ. ಇದಾದ ನಂತರ ನನ್ನ ತಂದೆಯು ನನ್ನ ತಾಯಿಯ ಬಗ್ಗೆ ಅನುಮಾನಪಟ್ಟು ತನ್ನ ತಾಯಿಯ ಹೆಸರಿನಲ್ಲಿದ್ದ ಎರಡು ಪ್ಲಾಟಗಳನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದ ಎಂದರೆ ಹೌದು ಮಾಡಿಕೊಂಡಿದ್ದರು ಆದರೆ ಯಾವ ಕಾರಣಕ್ಕಾಗಿ ಅವುಗಳನ್ನು ನನ್ನ ತಾಯಿಯಿಂದ ವಾಪಸ್ಸ ಬರೆಸಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

14. ನನ್ನ ತಂದೆಯ ಸಾವಿನ ಬಗ್ಗೆ ನನಗೆ ಅನುಮಾನ ಬಂದು ನನ್ನ ದೊಡ್ಡಪ್ಪ ಚಾಸಾಃ 27 ರವರ ಜೊತೆ ಚರ್ಚಿಸಿದೆ ಆಗ ಅವರು ಎದುರು ಮನೆ ಇರುವ ಸಿಸಿಟಿವಿಯನ್ನು ನೋಡಿದಾಗ

07.08 ನಿಮಿಷಕ್ಕೆ ಇಬ್ಬರು ವ್ಯಕ್ತಿಗಳು ನಮ್ಮ ಮನೆಯ ಒಳಗೆ ಹೋಗಿ 07.50 ರ ಸುಮಾರಿಗೆ ಹೊರಗೆ ಬಂದಿದ್ದು, ಕೈಗಳಿಗೆ ಗ್ಲೌಸ್ ಗಳನ್ನು ಹಾಕಿಕೊಂಡಿದ್ದರು, ಅವರುಗಳಲ್ಲಿ ಒಬ್ಬ ನನ್ನ ತಾಯಿಗೆ ಪರಿಚಯವಾದ ಶೋಭಿತಗೌಡ ಆಗಿದ್ದ ಎಂದು ಸೂಚಿಸುವುದು ಸರಿಯಲ್ಲ. ಆದಾದ ನಂತರ ನಮ್ಮ ಮನೆಯ ಕೆಲಸದವಳಾದ ನಂದಾ ಕುರಿಯಾ ಚಾಸಾಃ 28 ಹಾಗೂ ಆಕೆಯ ಗಂಡ ನಿಪಿಃ 29 ಸಹ ಬಂದು ಹೋಗಿದ್ದಾರೆಂದು ಕಂಡು ಬಂತು ಎಂದು ಸೂಚಿಸುವುದು ಸರಿಯಲ್ಲ. ಆನಂತರ ಈ ಎಲ್ಲಾ ವಿಚಾರಗಳಿಂದ ನನಗೆ ನನ್ನ ತಂದೆಯ ಸಾವಿನಲ್ಲಿ ಸಂಶಯ ಇತ್ತು, ನನ್ನ ತಂದೆಯನ್ನು ನನ್ನ ತಾಯಿ ಹಾಗೂ ಮನೆ ಕೆಲಸದವರು ಹಾಗೂ ಆಕೆಗೆ ಪರಿಚಯದ ಶೋಭಿತಗೌಡ ಹಾಗುಾ ಮತ್ತೊಬ್ಬ ಸೇರಿ ಕೊಲೆ ಮಾಡಿದ್ದಾರೆಂದು ಸಾಕ್ಷಿಗಳನ್ನು ಮುಚ್ಚಿ  ಹಾಕಲು ಸಿಸಿಟಿವಿ ದೃಶ್ಯಾವಳಿಗಳನ್ನು ಡಿಲಿಟ್ ಮಾಡಿದ್ದಾರೆಂದು ನಾನೇ ಈ ಪ್ರಕರಣದಲ್ಲಿ ದೂರು ನೀಡಿದೆ ಎಂದರೆ ನಾನು ದೂರಿನ ಸಾರಾಂಶಗಳನ್ನು ಓದಿರುವುದಿಲ್ಲ ಎಂದು ಹೇಳುತ್ತಾರೆ.

15. ದಿಃ 17.10.2024 ರಂದು ಮಾಳಮಾರುತಿ ಪೋಲೀಸರು ನನ್ನ ತಾಯಿ, 2 ನೇ ಆರೋಪಿ ಶೋಭರಾಜ ಎಸ್.ಎನ್. @ ಶೋಭಿತಗೌಡ ಹಾಗೂ 3 ನೇ ಆರೋಪಿ ಪವನ ತಂದೆ ರಾಮನಕುಟ್ಟಿ ಯನ್ನು ತೋರಿಸಿದರು ಎನ್ನುವುದು ಸರಿ. ಆ ಕಾಲಕ್ಕೆ 1 ರಿಂದ 3 ಜನ ಆರೋಪಿತರ ಜೊತೆ ಒಬ್ಬ ಮಂಜುನಾಥ ಎಂಬ ವ್ಯಕ್ತಿಯು ಸೇರಿ ನಮ್ಮ ತಂದೆಯನ್ನು ಕೊಲೆ ಮಾಡಿದ್ದಾರೆಂದು ತಿಳಿಯಿತು ಎಂದರೆ ಆ ವಿಚಾರ ಈಗ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಆ ಬಗ್ಗೆ ನಾನು ಹೇಳಿಕೆ ಕೊಟ್ಟ ಬಗ್ಗೆಯೂ ಸಹ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆದರೆ ಸದರಿ ಹೇಳಿಕೆಯನ್ನು ಗುರುತಿಗಾಗಿ ನಿಪಿಃ 73 ಎಂದು ಗುರುತಿಸಲಾಯಿತು.

16. ದಿಃ 19.10.2024 ರಂದು ಈ ಪ್ರಕರಣದ 4 ನೇ ಆರೋಪಿಯ್ನು ಪೋಲೀಸರು ತೋರಿಸಿದರು ಎಂದರೆ ಸರಿ. ಆ ಕಾಲಕ್ಕೆ ಆತನು ನನ್ನ ತಂದೆಯನ್ನು ಕೊಲೆ ಮಾಡಲು ನನ್ನ ತಾಯಿಯ ಬಳಿ ಆತನಿಗೆ ನಿದ್ರೆ ಮಾತ್ರೆಗಳನ್ನು ಹಾಕಲು ಈತನೇ ಕೊಟ್ಟಿದ್ದು ಎಂದು ಹಾಗೂ ಕೊಲೆ ಮಾಡುವ ಮುನ್ನ ಅವರಿಗೆ ಎಟ್ರಾಪಿಡ್ ಎಂಬ ಔಷಧಿಯ ಚುಚ್ಚುಮದ್ದು ಮಾಡಿದವನು ಇವನೇ ಎಂದು ತಿಳಿಸಿದರು ಎಂದರೆ ಅದು ಈಗ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಈಗ ಮೇಲೆ ಹೇಳಿದಂತೆ ನಾನು ಮರು ಹೇಳಿಕೆಯನ್ನು ಪೋಲೀಸರ ಮುಂದೆ

ಹೇಳಿದ್ದೇನೆಂದರೆ ಅದನ್ನು ನನ್ನ ದೊಡ್ಡಪ್ಪ ಚಾಸಾಃ 27 ರವರು ಹೇಳಿಕೊಟ್ಟಂತೆ ಹೇಳಿದ್ದೇನೆಂದು ಹೇಳುತ್ತಾರೆ. ಸದರಿ ಹೇಳಿಕೆಯನ್ನು ಈಗ ನಿಪಿಃ 74 ಎಂದು ಗುರುತಿಸಲಾಯಿತು.

17. ಹಾಲಿ ನನ್ನ ತಾಯಿಯ ತಂದೆಯ ಮನೆಯಲ್ಲಿ ವಾಸಿಸುತ್ತಿದ್ದೇನೆ ಆದರೆ ನಾನು ನನ್ನ ವಿದ್ಯಾಭ್ಯಾಸದ ಪ್ರಯುಕ್ತ ಈಗ ಬೆಂಗಳೂರಿನಲ್ಲಿದ್ದು ಹಾಲಿ ಈಗ ನನ್ನ ಅಜ್ಜನ ಮನೆಯಲ್ಲಿ ವಾಸಿಸುತ್ತಿದ್ದೇನೆಂದು ಹೇಳುತ್ತಾರೆ. ನಾನು ನನ್ನ ತಮ್ಮಂದಿರು ನೀಡಿದ ಹೇಳಿಕೆ, ನಮ್ಮ ಮನೆಯಲ್ಲಿ ಅಳಿಸಿ ಹಾಕಿದ ಸಿಸಿಟಿವಿ ದೃಶ್ಯಾವಳಿಗಳು, ಎದುರು ಮನೆಯವರ ಸಿಸಿಟಿವಿಯಲ್ಲಿ ಕಂಡ ದೃಶ್ಯಾವಳಿಗಳ ಆಧಾರದ ಮೇಲೆ ಹಾಗೂ ನನ್ನ ತಂದೆಯ ಮುಖ ಊತು ಬಂದು ಕಪ್ಪನೆಯದಾಗಿದ್ದು ಇದು ನನ್ನ ತಾಯಿ ಹಾಗೂ ಆರೋಪಿ 2 ಮತ್ತು 3 ರವರು ಕೂಡಿಕೊಂಡು ಕೊಲೆ ಮಾಡಿದ್ದಾರೆಂದು ಸಂಶಯ ಬಂದು ನಾನೇ ಸ್ವತಃ ದೂರು ನೀಡಿದ್ದರೂ ಸಹಿತ ಅದನ್ನು ನನ್ನ ದೊಡ್ಡಪ್ಪ ಚಾಸಾಃ 27 ರವರ ಒತ್ತಾಯದ ಮೇರೆಗೆ ನೀಡಿದ್ದೆ ಎಂದು ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆಂದು ಸೂಚಿಸುವುದು ಸರಿಯಲ್ಲ. ನಾನು ಸತ್ಯ ಹೇಳಿದರೆ 1 ನೇ ಆರೋಪಿಯಾದ ನನ್ನ ತಾಯಿ, 5 ನೇ ಆರೋಪಿಯಾದ ನನ್ನ ಮಾವನಿಗೆ ಶಿಕ್ಷೆ ಆಗುತ್ತದೆ ಎಂಬ ಕಾರಣಕ್ಕಾಗಿ ನ್ಯಾಯಾಲಯದಲ್ಲಿ ನಾನು ಈ ಪ್ರಕರಣದಲ್ಲಿ ನಾನು ಸ್ವ-ಇಚ್ಛೆಯಿಂದ ದೂರನ್ನು ನೀಡಿಲ್ಲ ಎಂದು ಸಾಕ್ಷ್ಯನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಆರ್.ಸಿ.ಪಿ. ವಕೀಲರಿಂದಃ**

ಆರೋಪಿತರ ಪರ ವಕೀಲರು ಗೈರು ಹಾಜರಿದ್ದು, ಆರೋಪಿತರು ಸಹ ಈ ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರದೇ ಇರುವುದರಿಂದ ಹಾಗೂ ಅವರಿಗೆ ಸಮಯ ನೀಡಲು ಯಾವುದೇ ಸಕಾರಣವನ್ನು ನೀಡದ ಕಾರಣ ಆರೋಪಿಗಳದು ಈ ಸಾಕ್ಷಿಗೆ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.